

ಚಿತ್ರ: ತಾಜುದ್ದೀನ್ ಆಜಾದ್



ನಾಗರಪಂಚಮಿಗೆ ಪೂಜೆಗೆ ಸಿದ್ಧವಾಗಿರುವ ನಾಗಮೂರ್ತಿಗಳು
ಚಿತ್ರ: ಗೋವಿಂದರಾಜ ಜವಳಿ

ನಾಗರಪಂಚಮಿ ನಾ ಯಾಕ, ಬಿಡಲೆವ್ವ ನನ್ನ
ತವರ ಮನಿಯ
ಇನ್ನೆರಡ ದಿನದಾಗ ನಮ್ಮಣ್ಣ ಬರತಾನ, ನನ್ನ
ಕರಿಯಲಾಕ....
ಅಳ್ಳಿಟ್ಟ ತಂಬಿಟ್ಟ ಮಾಡೀದ ಎಳ್ಳುಂಡಿ,
ನಾಗಪ್ಪಗೆಡಿ ಹಿಡಿಬೇಕ
ಸುಖ ನೀಡು ಎನಬೇಕ

ಎನ್ನುತ್ತ ಗುನುಗುವ ಮಗಳು ತವರುಮನೆಗೆ ಹೋಗಿ ಏನೇನು ಮಾಡಬೇಕು ಎಂದು ಮನದಲ್ಲೇ ಮಂಡಿಗೆ ತಿನ್ನುತ್ತಾಳೆ. ಉಂಡಿ ಕಟ್ಟುವ, ತಿನ್ನುವ ಖುಷಿಗಾಗಿ ಅವಳ ಮನೆ ಹಾತೊರೆಯುತ್ತದೆ.

ಪಂಚಮಿ ಬಂತವ್ವ ಸನಿಯಾಕ, ನಮ್ಮಣ್ಣ ಬರಲಿಲ್ಲ
ಕರಿಯಾಕ
ಕರಿ ಸೀರೆ ಉಡಸಾಕ, ಅಳ್ಳಿಟ್ಟ ತಂಬಿಟ್ಟ ತಿನ್ನಾಕ...

ಎಂದು ಜನಪದರೊಬ್ಬರು ಹಾಡಿದ್ದಾರೆ. ಶ್ರಾವಣದ ಮೊದಲ ದೊಡ್ಡ ಹಬ್ಬವಾದ ನಾಗರ ಪಂಚಮಿಗೆ ಕರೆಯಲು ಅಣ್ಣ ತಂಗಿಯ ಮನೆಗೆ ಹೋದರೆ, ತಂಗಿ ಅವನ ಬೆನ್ನಿಗೆ ತನಿ ಎರೆದು ತವರ ಬಳ್ಳಿ ಸುಖವಾಗಿರಲಿ ಎಂದು ಹಾರೈಸುತ್ತಾಳೆ. ತವರು ಮನೆಯಿಂದ ತಂಗಿಯ ಉಡಿ ತುಂಬಿ ಆಕೆ ಸುಖವಾಗಿರಲಿ ಎಂಬ ಹಾರೈಕೆ ಮಾಡಲಾಗುತ್ತದೆ. ಇದು ಹಿಂದಿನ ಕಾಲದ ಸಂಪ್ರದಾಯ. ಇಂದು ಅಂಥ ಸನ್ನಿವೇಶ ಇಲ್ಲವಾದರೂ ಪಂಚಮಿ ಹಬ್ಬವೆಂದರೆ ಮಹಿಳೆಯರಿಗೆ ತುಸು ಹೆಚ್ಚೇ ಪ್ರೀತಿ. ರೈತನ ಮಿತ್ರ ನಾಗರ ಎಂದೇ ಜನಜನಿತವಾಗಿದೆ. ಹೊಲದಲ್ಲಿಯ ಹುಳು ಹುಪ್ಪಟೆ, ಇಲಿಗಳನ್ನು ತಿಂದು ಬೆಳೆ ರಕ್ಷಿಸುವ ಜೀವಿಯಾದ್ದರಿಂದಲೂ ನಾಗರಪಂಚಮಿಯಂದು ನಾಗಪ್ಪನಿಗೆ ಪೂಜೆ ಸಲ್ಲಿಸಲಾಗುತ್ತದೆ ಎಂಬ ನಂಬಿಕೆಯೂ ಇದೆ.

‘ಹೆಣ್ಣುಮಕ್ಕಳ ಹಬ್ಬ ಇದು. ಪಂಚಮಿ ಹಬ್ಬಕ್ಕೆ ಹೆಣ್ಣುಮಗಳನ್ನು ಗಂಡನ ಮನೆಯಿಂದ ತವರು ಮನೆಗೆ ಕರೆತರುತ್ತಾರೆ. ಅಲ್ಲಿ ಸೊಸೆಯರಿಗಿಂತ ಮಗಳು ಹಾಲೆರೆಯುವುದೇ ಪ್ರಮುಖ. ಪಂಚಮಿ ಹಾಡು ಹಾಡುತ್ತ, ಜೋಕಾಲಿ ಆಡುತ್ತ ಸಂತಸ ಪಡುವುದಷ್ಟೇ ಅಲ್ಲ. ಥರಥರದ ಉಂಡಿಗಳನ್ನು ಕಟ್ಟುತ್ತಾರೆ. ರಾಜಗಿರಿ, ಶೇಂಗಾ, ಪುಟಾಣಿ, ರವೆ, ಗುಳಪ್ಪನ ಉಂಡಿ, ಅವಲಕ್ಕಿ ಉಂಡಿ, ಬೂಂದಿ ಉಂಡಿ, ಬೇಸನ್, ಗೋಧಿ... ಹೀಗೆ 11ರಿಂದ 20 ತರಹದ ಉಂಡಿಗಳು ಸಿದ್ಧವಾಗುತ್ತವೆ. ಜೋಳ, ಸಜ್ಜೆ ರೊಟ್ಟಿಗಳನ್ನು ಮಾಡಿ ಮನೆಮನೆಗೆ ಹಂಚುತ್ತಾರೆ. ಹುತ್ತದ ಮಣ್ಣಿನಿಂದಲೇ ನಾಗಪ್ಪನನ್ನು ಮಾಡುವ ಪರಿಪಾಟವೂ ಕೆಲವೆಡೆ ಇದೆ. ಬಂಧುಬಳಗದ ಹೆಸರಿನಲ್ಲಿ ಹಾಲು ಎರೆಯುತ್ತಾರೆ’ ಎಂದು ಧಾರವಾಡದ ಜಾನಪದ ಸಂಶೋಧನಾ ಕೇಂದ್ರದ ಅಧ್ಯಕ್ಷೆ ವಿಶ್ವೇಶ್ವರಿ ಹಿರೇಮಠ ಹಿರೇಮಠ ತಿಳಿಸಿದರು. ನಾಗರಪಂಚಮಿಯ ಪೂರ್ಣ ಚಿತ್ರಣವನ್ನೇ ಬಿಚ್ಚಿಡುವ ಸ್ವಾರಸ್ಯಕರ ಹಾಡೊಂದನ್ನು ಅವರ ನೆನಪಿನ ಕಣಜದಿಂದ ಹೆಕ್ಕಿಕೊಟ್ಟರು.

ಪಂಚಮಿ ಹಬ್ಬ ಬಂದೈತಿ, ಜೋಕಾಲಿ ಕಟ್ಟೇತಿ
ಸುಯ್ಯಂತ ತೂಗಾಕ,
ಬರ್ತೀಯೇನ ಹಳ್ಳೀಗೆ
ಹೂವಿನ ಬಳ್ಳೀಗೆ,
ಸೂಸಗಾಳಿ
ಬೀಸಾಕ...
ಅಂಟಿನ ಉಂಡಿ



ಎಳ್ಳುಂಡಿ